	ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ				
27	ಕಾನೂನು	ರಾಜಸ್ವ	438.00	----	438.00
28	ಸಂಸದಿಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	148.16	----	148.16
	ಒಟ್ಟು:	ರಾಜಸ್ವ	347562.60	1685.53	349248.13
		ಬಂಡವಾಳ	271496.43		271496.43
	ಒಟ್ಟು ಮೊತ್ತ:		619059.03	1685.53	620744.56

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2008–2009ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಸ್.ಬಿ.ಪಾಟೀಲ್
ಕಾರ್ಯದರ್ಶಿ

<u>ಕರ್ನಾಟಕ ವಿಧಾನ ಸಭೆ</u>

14 ಶ್ರೀ. ವೈ.ಎನ್.ರುದ್ರೇಶ ಗೌಡ
ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

ಅ) ಹಾಸನ ಜಿಲ್ಲೆಯಲ್ಲಿ ಆಲೂಗಡ್ಡೆ ಬೆಳೆಯು ರೋಗದಿಂದ ಹಾನಿಯಾಗಿರುವುದು ನಿಜವೇ;

ಹೌದು

ಆ) ಹಾಗಿದ್ದಲ್ಲಿ, ಹಾನಿಯಾಗಿರುವ ಪ್ರದೇಶವೆಷ್ಟು;

55,565 ಹೆಕ್ಟೇರ್

ಇ) ಹಾಗಿದ್ದಲ್ಲಿ, ಯಾವ ರೋಗದಿಂದ ಬೆಳೆ ಹಾನಿಯಾಗಿರುತ್ತದೆ

ಕೊನೆಯ ಅಂಗಮಾರಿ ರೋಗ

ಈ) ರಾಜ್ಯ ಸರ್ಕಾರವು ಬೆಳೆ ಹಾನಿಯಾಗಿರುವ ಪ್ರದೇಶಗಳಿಗೆ ಪರಿಹಾರ ಧನವನ್ನು ನೀಡಲಾಗಿದೆಯೇ;

ಕಂದಾಯ ಇಲಾಖೆಯಿಂದ ಕೇಂದ್ರೀಯ ವಿಪತ್ತು ಪರಿಹಾರ ನಿಧಿಯಿಂದ ನಿಗದಿಸಲ್ಪಟ್ಟ ಮೊತ್ತವನ್ನು ಜಿಲ್ಲಾಧಿಕಾರಿಗಳು ಕೊಟ್ಟಿರುತ್ತಾರೆ.

ಉ) ಹಾಗಿದ್ದಲ್ಲಿ, ಯಾವ ಯಾವ ತಾಲ್ಲೂಕಿಗೆ ಎಷ್ಟು ಪರಿಹಾರ ಧನ ಬಿಡುಗಡೆ ಮಾಡಲಾಗಿದೆ; (ವಿವರ ನೀಡುವುದು);

ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಕಂದಾಯ ಇಲಾಖೆಯು ರೂ.279 ಲಕ್ಷಗಳ ಪರಿಹಾರವನ್ನು ನೀಡಿರುತ್ತದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ;

ತಾಲ್ಲೂಕು	ರೈತರ ಸಂಖ್ಯೆ	ಪರಿಹಾರದ ಮೊತ್ತ (ರೂ. ಲಕ್ಷಗಳಲ್ಲಿ)
ಆಲೂರು	2055	7.85
ಅರಕಲಗೂಡು	2274	35.17
ಅರಸೀಕೆರೆ	1445	22.30
ಬೇಲೂರು	1546	34.40
ಚನ್ನರಾಯಪಟ್ಟಣ	1659	19.06
ಹೊಳೆನರಸೀಪುರ	3116	21.55
ಹಾಸನ	7195	138.67
ಒಟ್ಟು	**19290**	**279.00**

ಊ) ರಾಜ್ಯ ಸರ್ಕಾರವು ಪರಿಹಾರ ಹಣವನ್ನು ಬಿಡುಗಡೆ ಮಾಡದೇ ಇದ್ದಲ್ಲಿ ಆವರ್ತನ ನಿಧಿಯಿಂದ ಈಗಲಾದರೂ ಹಣ ಬಿಡುಗಡೆ ಮಾಡಲಾಗುವುದೇ?

ಹಣವನ್ನು ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ವಿಧಾನಸಭೆ

15 ಮಾನ್ಯ ಶ್ರೀ ರುದ್ರೇಶಗೌಡ ವೈ.ಎನ್ (ಬೇಲೂರು)

ಮಾನ್ಯ ಕೃಷಿ ಸಚಿವರು

ಅ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಕೃಷಿ ಇಲಾಖೆಗೆ ಮಂಜೂರಾದ ಹುದ್ದೆಗಳೆಷ್ಟು (ವಿವರ ನೀಡುವುದು)

ಆ) ಈ ಕಛೇರಿಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು (ವಿವರ ನೀಡುವುದು)

ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ವಿವರ ನೀಡುವುದು)